# 3 ನೇ ಅಧಿಕ ಜಿಲ್ಲಾ ಮತ್ತ ಸತ್ರ ನ್ಯಾಯಾಲಯ, ತುಮಕೂರು.

## Spl.C. 23/2014

ಚಾ.ಸಾ.16

ಫ್ರಾ.ಸಾ.12

ದಿನಾಂಕಃ 24-07-2019 ರಂದು, ಗೌರವಾನ್ವಿತ ಉಚ್ಚನ್ಯಾಯಾಲಯದಿಂದ ಪ್ರಕಟಣೆ ಮಾಡಿರುವ ಅಧೀನ ನ್ಯಾಯಾಲಯದ ಎಸ್.ಓ.ಪಿ ಯಲ್ಲಿ ಸಾಕ್ಷಿಯು ಸರ್ಕಾರಿ ಅಧಿಕಾರಿಯಾಗಿರುವುದರಿಂದ ಸಾಕ್ಷಿಯವರನ್ನು ನ್ಯಾಯಾಲಯದಲ್ಲಿ ಪಡೆದುಕೊಳ್ಳಲು ಅನುಮತಿ ನೀಡಿರುವುದರಿಂದ ದಿನಾಂಕ: 16-09-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ರಂಗಸ್ವಾಮಿ |
| ತಂದೆ ಹೆಸರು | : | ಭೀಮಯ್ಯ |
| ವಯಸ್ಸುಃ | | 65 |
| ಉದ್ಯೋಗ | : | ನಿವೃತ್ತ ಆರಕ್ಷಕ ಸಹಾಯಕ ಉಪನಿರೀಕ್ಷಕರು |
| ವಾಸ: | : | ಬೆಂಗಳೂರು. |

ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ:

ನಾನು ಜೂನ್ 2013 ನೇ ಸಾಲಿನಿಂದ ಮೇ 2016 ರವರೆಗೆ ದಂಡಿನಶಿವರ ಅರಕ್ಷಕ ಠಾಣೆಯಲ್ಲಿ ನಾನು ಸಹಾಯಕ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 5-8-2013 ರಂದು ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯಿಂದ ಲಿಖಿತ ತಿಳುವಳಿಕೆ ಬಂದಿದ್ದು, ನಾನು ಅದನ್ನು ಸ್ವೀಕರಿಸಿ, ತುಮಕೂರು ಜಿಲ್ಲಾ ಆಸ್ಪತ್ರೆಗೆ ಮಧ್ಯಾಹ್ನ 12-30 ಗಂಟೆಗೆ ಹೋಗಿ ಅಲ್ಲಿ ಗಾಯಾಳು ಲಕ್ಷ್ಮಯ್ಯನವರ ಹೇಳಿಕೆಯನ್ನು ಆ ದಿನ ಕರ್ತವ್ಯದಲ್ಲಿದ್ದ ವೈದ್ಯರ ಸಮಕ್ಷಮ ಪಡೆದಿದ್ದೇನೆ.

ನಂತರ ಠಾಣೆಗೆ ಬಂದು ಮಧ್ಯಾಹ್ನ 1-30 ಗಂಟೆಗೆ ಠಾಣಾ ಮೊಕದ್ದಮೆ ಸಂಖ್ಯೆಃ 65/2013 ರಲ್ಲಿ ಪ್ರಕರಣ ದಾಖಲಿಸಿ ಅಸಲು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ಪಡೆದಿರುವ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಗುರುತಿಸಿದ ಹೇಳಿಕೆಯು ಈಗಾಗಲೇ ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ.9 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

ಸದರಿ ಪ್ರಕರಣವು ಪರಿಶಿಷ್ಟ ಜಾತಿ ಪಂಗಡ ದೌರ್ಜನ್ಯ ತಡೆ ಕಾಯಿದೆ ವ್ಯಾಪ್ತಿಗೆ ಬರುವ ಪ್ರಕರಣವಾದ ಕಾರಣ ಚಾಸಾಃ 17 ರವರಿಗೆ ಮುಂದಿನ ತನಿಖೆಗಾಗಿ ನಾನು ಕಡತವನ್ನು ನಿವೇದಿಸಿಕೊಂಡಿರುತ್ತೇನೆ.

ಜಿಲ್ಲಾ ಆಸ್ಪತ್ರೆ ತುಮಕೂರು ರವರು ನೀಡಿರುವ ಲಿಖಿತ ತಿಳುವಳಿಕೆಯನ್ನು ನಿಪಿ.10 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ.ಕೆ.ಆರ್.ಯು. ವಕೀಲರಿಂದ:</u>

ನಿಪಿ.10 ನ್ನು ನಮ್ಮ ಠಾಣೆಯ ಪೇದೆ ರವಿಕುಮಾರ್ ರವರು ನನಗೆ ತಲುಪಿಸಿದ್ದಾರೆ. ರವಿಕುಮಾರ್ ರವರಿಗೆ ಗಾಯಾಳು ಆಸ್ಪತ್ರೆಗೆ ಹೋಗಿದ್ದ ಬಗ್ಗೆ ಯಾರು ವಿಷಯ ತಿಳಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಚಾಸಾಃ 1 ರವರು ನನ್ನ ಮುಂದೆ ನಿಪಿ.1 ರಂತೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ವೈದ್ಯರಿಂದ ಚಾಸಾಃ 1 ರವರು ಆ ದಿನ ಹೇಳಿಕೆ ನೀಡಲು ದೈಹಿಕವಾಗಿ ಸದೃಡರಾಗಿದ್ದಾರೆ ಎಂಬ ಬಗ್ಗೆ ನಾನು ವರದಿ ಪಡೆದಿಲ್ಲ ಎಂದರೆ ಸರಿ.

ದಿನಾಂಕಃ 5-9-2013 ರಂದು ನಾನು ಪ್ರಕರಣದ ಆರೋಪಿತರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಆದೇಶದಂತೆ ಸುಳ್ಳು ದೂರನ್ನು ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ - ಇರುವುದಿಲ್ಲ.</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಎಂದು ಒಪ್ಪಿರುತ್ತಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ತುಮಕೂರು.